# ಉಣ್ಣೆ ವಲಯ ಪುನ:ಶ್ಚೇತನ ಯೋಜನೆಯಡಿ ಚಿತ್ರದುರ್ಗ ಜಿಲ್ಲೆಯ ಉಣ್ಣೆ ಕೈಮಗ್ಗ ನೇಕಾರರ ಅಭಿವೃದ್ಧಿಗಾಗಿ ಒದಗಿಸಿರುವ ಮೂಲಭೂತ ಸೌಲಭ್ಯಗಳನ್ನು ನೇಕಾರರು ಸದುಪಯೋಗ ಪಡಿಸಿಕೊಂಡಿರುವ ಬಗ್ಗೆ ಸಂಕ್ಷಿಪ್ತ ವರದಿ

ಉಣ್ಣೆ ವಲಯದ ನೇಕಾರರ ಅಭಿವೃದ್ಧಿಗಾಗಿ ಯೋಜನೆಯಡಿ ಕುರಿಗಳ ಉಣ್ಣೆ ಕತ್ತರಿಸುವ ಯಂತ್ರ.ಉಣ್ಣೆ ಸಾಗಣಿಕೆ ವಾಹನ, ಉಣ್ಣೆ ಸಂಗ್ರಹಣ ಉಗ್ರಾಣ, ಉಣ್ಣೆ ಉತ್ತರಿಸುವ ಟೇಬಲ್, ಜನರೇಟರ್, ಉಗ್ರಾಣದ ಪೀಠೋಪಕರಣದ ಹಾಗೂ ಇತರೆ, ಸುಧಾರಿತ ಕಾರ್ಡಿಂಗ್ ಯಂತ್ರ ಪೂರೈಕೆ., ಮೆಡ್ಡೇರಿ ಚರಕ ಪೂರೈಕೆ, ಕೌಶಲ್ಯಾಭಿವೃದ್ಧಿ ಕೇಂದ್ರ ಸ್ಥಾಪನೆ, ಸಾಮೂಹಿಕ ಸೌಲಭ್ಯ ಕೇಂದ್ರ ನಿರ್ಮಾಣ ಈ ಸೌಲಭ್ಯಗಳಿಗಾಗಿ 2013-14, 2014-15 ಹಾಗೂ 2015-16 ನೇ ಸಾಲಿನಲ್ಲಿ ಅನುದಾನ ಒದಗಿಸಲಾಗಿರುತ್ತದೆ. ಕಾಂಪೋನೆಂಟ್‌ವಾರು ಜಿಲ್ಲೆಯ ಉಣ್ಣೆ ಕೈಮಗ್ಗ ನೇಕಾರ ಸಹಕಾರ ಸಂಘಗಳಿಗೆ ಒದಗಿಸಲಾಗಿರುವ ಸೌಲಭ್ಯಗಳ ಮಾಹಿತಿಯನ್ನು ಮತ್ತು ಸೌಲಭ್ಯವನ್ನು ನೇಕಾರರು ಸದುಪಯೋಗ ಪಡಿಸಿಕೊಂಡಿರುವ ಬಗ್ಗೆ ಛಾಯಾಚಿತ್ರದೊಂದಿಗೆ ವಿವರಗಳನ್ನು ಕೆಳಕಂಡಂತೆ ಒದಗಿಸಲಾಗಿದೆ.

## ಕೌಶಲ್ಯಾಭಿವೃದ್ಧಿ ಕೇಂದ್ರ ತರಬೇತಿ ಕೇಂದ್ರ ಸ್ಥಾಪನೆ

**ಸುಧಾರಿತ ಮಗ್ಗಗಳಲ್ಲಿ ಉಣ್ಣೆ ಬ್ಯಾಂಕೆಟ್ ಉತ್ಪಾದನೆ ಮಾಡಲು ಉಣ್ಣೆ ನೇಕಾರರಿಗೆ ಅಗತ್ಯ ತರಬೇತಿ ನೀಡುವ ಉದ್ದೇಶದಿಂದ ಜಿಲ್ಲೆಯಲ್ಲಿ 2 ಕೌಶಲ್ಯಾಭಿವೃದ್ಧಿ ಕೇಂದ್ರಗಳ ಸ್ಥಾಪನೆಗೆ ತಲಾ ರೂ.35.00ಲಕ್ಷಗಳಂತೆ ಅನುದಾನ ಮಂಜೂರು ಮಾಡಲಾಗಿರುತ್ತದೆ. ಇದರಲ್ಲಿ ಕೊಂಡ್ಲಹಳ್ಳಿ ಗ್ರಾಮದಲ್ಲಿ ಉಣ್ಣೆ ಕೌಶಲ್ಯಭಿವೃದ್ಧಿ ತರಬೇತಿ ಕೇಂದ್ರ ಸ್ಥಾಪನೆಯಾಗಿದ್ದು ಪ್ರೇಮ್‌ಲೂಂನಲ್ಲಿ ತರಬೇತಿಯನ್ನು ನೀಡ ಬಹುದಾಗಿರುತ್ತದೆ.**

**ಚೌಳೂರು ಗ್ರಾಮದಲ್ಲಿ ಮತ್ತೊಂದು ಕೌಶಲ್ಯಾಭಿವೃದ್ಧಿ ಕೇಂದ್ರದ ಸ್ಥಾಪನೆ ಪ್ರಗತಿಯಲ್ಲಿರುತ್ತದೆ.**

ತರಬೇತಿ ಕೇಂದ್ರದ ಛಾಯಾಚಿತ್ರ







# ಸಾಮೂಹಿಕ ಸೌಲಭ್ಯ ಕೇಂದ್ರ

ಕಂಬಳಿ ನೇಕಾರರು ಹೆಚ್ಚಾಗಿರುವ ಸ್ಥಳಗಳಲ್ಲಿ ನೇಕಾರರು ಸಾಮೂಹಿಕವಾಗಿ ಒಂದೇ ಸ್ಥಳದಲ್ಲಿ ನೇಯ್ಗೆ ಉದ್ಯೋಗ ಮಾಡಲು ಅನುಕೂಲವಾಗುವಂತೆ ಕೈಮಗ್ಗ ಮತ್ತು ಸುಧಾರಿತ ಉಪಕರಣಗಳನ್ನು ಅಳವಡಿಸಿ ಉತ್ಪಾದನೆಗೆ ತೊಡಗಿಸುವ ಮೂಲಕ ನೇಕಾರರ ಜೀವನ ಮಟ್ಟವನ್ನು ಸುದಾರಿಸಲು ಜಿಲ್ಲೆಯಲ್ಲಿ ರೂ.10.00ಲಕ್ಷಗಳ ವೆಚ್ಚದಲ್ಲಿ ಕನಿಷ್ಠ 1500 ಚದುರಡಿ ವಿಸ್ತೀರ್ಣವುಳ್ಳ ಒಟ್ಟು 20 ಸಾಮೂಹಿಕ ಸೌಲಭ್ಯಗಳನ್ನು ಸ್ಥಾಪಿಸಲು ಅನುದಾನ ಮಂಜೂರಾಗಿರುತ್ತದೆ. ಈ ಪೈಕಿ 13 ಸಾಮೂಹಿಕ ಸೌಲಭ್ಯ ಕೇಂದ್ರ ಕಟ್ಟಡ ನಿರ್ಮಾಣ ಪೂರ್ಣಗೊಂಡಿದ್ದು ಉಳದವು ಪ್ರಗತಿಯಲ್ಲಿರುತ್ತವೆ.



**ಚಿಕ್ಕಹಳ್ಳಿಯಲ್ಲಿ ನಿರ್ಮಿಸಿರುವ ಸಾಮೂಹಿಕ ಸೌಲಭ್ಯ ಕೇಂದ್ರ**



**ಪಗಡಲಬಂಡೆಯಲ್ಲಿ ನಿರ್ಮಿಸಿರುವ ಸಾಮೂಹಿಕ ಸೌಲಭ್ಯ ಕೇಂದ್ರ**

## ಉಣ್ಣೆ ಸಂಗ್ರಹಣಾ ಉಗ್ರಾಣ

ಉಣ್ಣೆ ಕೈಮಗ್ಗ ನೇಕಾರ ಸಹಕಾರ ಸಂಘಗಳು ಖರೀದಿಸುವ ಉಣ್ಣೆಯನ್ನು ಸಂಗ್ರಹಿಸಿ ನೂಲು ಉತ್ಪಾದನೆಗೆ ಬಳಸಲು ಅನುಕೂಲವಾಗುವಂತೆ ಹಾಗೂ ಸಂಗ್ರಹಿಸಲಾದ ಕುರಿ ಉಣ್ಣೆಯನ್ನು ಸುರಕ್ಷಿತವಾಗಿ ದಾಸ್ತಾನು ಮಾಡುವುದಕ್ಕಾಗಿ ತಲಾ 5 ಲಕ್ಷಗಳ ವೆಚ್ಚದಲ್ಲಿ ಕನಿಷ್ಠ 750 ಚದುರ ವಿಸ್ತೀರ್ಣವುಳ್ಳ 16 ಉಣ್ಣೆ ಸಂಗ್ರಹಣಾ ಉಗ್ರಾಣ ಕಟ್ಟಡ ನಿರ್ಮಾಣ ಮಾಡಲು ಜಿಲ್ಲೆಗೆ ಅನುದಾನ ಮಂಜೂರಾಗಿರುತ್ತದೆ. ಈ ಪೈಕಿ 9 ಕಟ್ಟಡಗಳ ನಿರ್ಮಾಣ ಪೂರ್ಣಗೊಂಡಿದ್ದು ಉಳಿದವು ಪ್ರಗತಿಯಲ್ಲಿರುತ್ತೆವೆ.



**ಓಬಳಾಪೂರ ಉಣ್ಣೆ ನೇಕಾರರ ಸಹಕಾರ ಸಂಘದಿಂದ ನಿರ್ಮಿಸಿದ ಉಗ್ರಾಣ**

## ಉಣ್ಣೆ ಕತ್ತರಿಸುವ ಯಂತ್ರ

ಜಿಲ್ಲೆಯ ನೇಕಾರರು ಕುರಿಗಳಿಂದ ಉಣ್ಣೆಯನ್ನು ಸಾಧಾರಣ ಕತ್ತರಿಗಳಿಂದ ಸಾಂಪ್ರದಾಯಿಕ ರೀತಿಯಲ್ಲಿ ಕತ್ತರಿಸುತ್ತಿದ್ದು ಇದರಿಂದ ಪೂರ್ಣ ಪ್ರಮಾಣದ ಉಣ್ಣೆಯನ್ನು ಕತ್ತರಿಸಲು ಸಾಧ್ಯವಾಗದೇ ಕುರಿಗಳೂ ಸಹ ಗಾಯಗಳಿಂದ ತೊಂದರೆ ಅನುಭವಿಸುವುದನ್ನು ತಪ್ಪಿಸಲು ಅದುನಿಕ ತಂತ್ರಜ್ಞಾನವುಳ್ಳ ಉಣ್ಣೆ ಕತ್ತರಿಸುವ ಯಂತ್ರಗಳಿಂದ ಸರಾಗವಾಗಿ ಉಣ್ಣೆ ಕತ್ತರಿಸಲು ಅನುಕೂಲವಾಗುವಂತೆ ತಲಾ ರೂ.3.50ಲಕ್ಷಗಳ ವೆಚ್ಚದಲ್ಲಿ 16 ಅದುನಿಕ ಉಣ್ಣೆ ಕತ್ತರಿಸುವ ಯಂತ್ರಗಳನ್ನು ಖರೀದಿಸಲು ಜಿಲ್ಲೆಗೆ ಅನುದಾನ ಮಂಜೂರಾಗಿರುತ್ತದೆ.

ಎಲ್ಲಾ 16 ಯಂತ್ರಗಳು ಸಂಘಗಳಿಗೆ ಸರಬರಾಜು ಅಗಿದ್ದು ಅವುಗಳನ್ನು ಬಳಸಿ ಉಣ್ಣೆ ಕತ್ತರಿಸಲು ತರಬೇತಿ ನೀಡಲಾಗಿದ್ದು ಸದರಿ ಯಂತ್ರಗಳನ್ನು ಉಣ್ಣೆ ಕತ್ತರಿಸಲು ಉಪಯೋಗಿಸಲಾಗುತ್ತಿದೆ.







**ಉಣ್ಣೆ ಕತ್ತರಿಸುವ ತರಬೇತಿ**



<table>
<tr><th colspan="2">ಸುಧಾರಿತ ಉಣ್ಣೆ ಕಾರ್ಡಿಂಗ್ ಯಂತ್ರ</th></tr>
<tr><td>ಕುರಿಗಳಿಂದ ಉಣ್ಣೆ ಕತ್ತರಿಸಿದ ನಂತರ ಉಣ್ಣೆಯಲ್ಲಿರುವ ದೂಳನ್ನು ತೆಗೆದು ನೂಲು ತಯಾರು ಮಾಡಲು ಶುದ್ಧ ಉಣ್ಣೆಯನ್ನು ಒದಗಿಸುವುದಕ್ಕಾಗಿ ಅದುನಿಕ ತಂತ್ರಜ್ಞಾನವುಳ್ಳ 29 ದೂಳು ರಹಿತ ಉಣ್ಣೆ ಕಾರ್ಡಿಂಗ್ ಯಂತ್ರಗಳನ್ನು ತಲಾ ರೂ. 2.00ಲಕ್ಷಗಳ ವೆಚ್ಚದಲ್ಲಿ ಸಂಘಗಳಿಗೆ ಒದಗಿಸಲು ಅನುದಾನ ಮಂಜೂರಾಗಿರುತ್ತದೆ. ಈ ಪೈಕಿ 6 ಯಂತ್ರಗಳನ್ನು ಸಂಘಗಳಿಗೆ ಪೂರೈಸಲಾಗಿದ್ದು ಅವುಗಳನ್ನು ಉಣ್ಣೆ ಕಾರ್ಡಿಂಗ್‌ಗೆ ಬಳಸಲಾಗುತ್ತಿದೆ. ಉಳಿದ ಯಂತ್ರಗಳನ್ನು ಸರಬರಾಜು ಮಾಡಲು ಕ್ರಮವಹಿಸಲಾಗಿದೆ.</td>
<td><br></td></tr>
</table>

## ಉಣ್ಣೆ ಸಾಗಾಣಿಕೆ ವಾಹನ

ಉಣ್ಣೆ ಕೈಮಗ್ಗ ನೇಕಾರ ಸಹಕಾರ ಸಂಘಗಳ ನೇಕಾರರು ಕಂಬಳಿ ನೇಯ್ಗೆ ಉದ್ಯೋಗಕ್ಕಾಗಿ ಅಗತ್ಯವಿರುವ ಉಣ್ಣೆಯನ್ನು ಮಾರುಕಟ್ಟೆಯಿಂದ ಖರೀದಿಸಲು ಮತ್ತು ಉತ್ಪಾದಿಸಿದ ಕಂಬಳಿಗಳನ್ನು ಮಾರುಕಟ್ಟೆಗೆ ಸಾಗಿಸಲು ಅನುಕೂಲವಾಗುವಂತೆ ತಲಾ ರೂ.5.00ಲಕ್ಷಗಳ ವೆಚ್ಚದಲ್ಲಿ ಜಿಲ್ಲೆಯಲ್ಲಿ 15 ಉಣ್ಣೆ ಸಾಗಾಣಿಕೆ ವಾಹನಗಳನ್ನು ಖರೀದಿಸಲು ಅನುದಾನ ಮಂಜೂರಾಗಿರುತ್ತದೆ.

ಸಹಕಾರ ಸಂಘಗಳು ಎಲ್ಲಾ 15 ವಾಹನಗಳನ್ನು ಖರೀದಿಸಿದ್ದು ಸದರಿ ವಾಹನಗಳನ್ನು ಚಳ್ಳಕೆರೆ ಕಂಬಳಿ ಮಾರುಕಟ್ಟೆ ಸೇರಿದಂತೆ ವಿವಿಧ ಸ್ಥಳಗಳಿಗೆ ಉಣ್ಣೆ ಮತ್ತು ಕಂಬಳಿಗಳನ್ನು ಸಾಗಿಸಲು ಉಪಯೋಗಿಸಲಾಗುತ್ತಿದೆ.







ಮಾನ್ಯ ಶಾಸಕರಿಂದ ಉಣ್ಣೆ ಸಾಗಾಣಿಕೆ ವಾಹನ ವಿತರಣೆ



## ಮೆಡ್ಲೇರಿ ಚರಕ

ನೇಕಾರರು ಸಾಮಾನ್ಯವಾಗಿ ಸಾಂಪ್ರದಾಯಿಕ ಕೈರಾಟೆಯಿಂದ ಉಣ್ಣೆ ನೂಲನ್ನು ತಯಾರಿಸುತ್ತಿದ್ದು ಇದರಿಂದ ಅಗುವ ದೈಯಿಕ ಶ್ರಮವನ್ನು ಕಡಿಮೆ ಮಾಡಿ ನೂಲು ಉತ್ಪಾದನೆಯನ್ನು ಹೆಚ್ಚಿಸುವ ಮತ್ತು ಗುಣಮಟ್ಟದ ನೂಲನ್ನು ತಯಾರಿಸಲು ಅನುಕೂಲವಾಗುವಂತೆ ಕಂಬಳ ನೇಕಾರರಿಗೆ ತಲಾ ರೂ.4600/– ಗಳ ವೆಚ್ಚದಲ್ಲಿ 455 ಮೆಡ್ಲೇರಿ ಚರಕಗಳ ಖರೀದಿಗೆ ಅನುದಾನ ಮಂಜೂರಾಗಿರುತ್ತದೆ. ಈ ಪೈಕಿ 380 ಮೆಡ್ಲೇರಿ ಚರಕಗಳು ಸರಬರಾಜು ಅಗಿದ್ದು ಉಳದ ಚೆರಕಗಳ ಸರಬರಾಜಿಗೆ ಕ್ರಮವಹಿಸಲಾಗಿದೆ.







# ಉಣ್ಣೆ ವಲಯ ನೇಕಾರರ ಅಭಿವೃದ್ಧಿಗಾಗಿ ಮಾರ್ಗಸೂಚಿ

ಸರ್ಕಾರವು ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ ಉಣ್ಣೆ ವಲಯದ ಪುನ್ಚೇನಕ್ಕಾಗಿ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ರೂ.27.00ಕೋಟಿಗಳ ಅನುದಾನವನ್ನು 2013–14 ರಿಂದ 2015–16ರವರೆಗೆ ಮೂರು ವರ್ಷಗಳಲ್ಲಿ ಯೋಜನೆಯನ್ನು ಕಾರ್ಯಗತಗೊಳಿಸಲು ಅನುಮೋದನೆ ನೀಡಿ ಹಂಚಿಕೆ ಮಾಡಲಾಗಿದೆ.

ಉಣ್ಣೆ ವಲಯದ ನೇಕಾರರ ಅಭಿವೃದ್ಧಿಗಾಗಿ ಹಂಚಿಕೆ ಮಾಡಿರುವ ಅನುದಾನವನ್ನು ವಿವಿಧ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಮಾರ್ಗಸೂಚಿಯನ್ನು ಜಾರಿಗೊಳಿಸಲು ಉದ್ದೇಶಿಸಿದ್ದು, ಮಾರ್ಗಸೂಚಿಯ ವಿವರ ಈ ಕೆಳಕಂಡಂತೆ ಇರುತ್ತದೆ.

1. <u>ಕುರಿಗಳ ಉಣ್ಣೆ ಕತ್ತರಿಸುವ ಯಂತ್ರ (**Wool shearing machine**):</u>

**ಉದ್ದೇಶ:** ಪ್ರಸ್ತುತ ಉಣ್ಣೆಯನ್ನುಕತ್ತರಿಗಳಿಂದ ಕತ್ತರಿಸುತ್ತಿದ್ದುಕುರಿಗಳಿಗೆ ಗಾಯವಾಗುವ ಹಾಗೂ ತುಪ್ಪಟದ ಉದ್ದವು ಕಡಿಮೆಯಾಗಲ್ಲಿದ್ದುಕಾರಣಆಧುನಿಕ ತಂತ್ರಜ್ಞಾನದ ಯಂತ್ರವನ್ನು ಬಳಸಿ ಉಣ್ಣೆ ಕತ್ತರಿಸುವುದರಿಂದ ಗುಣಮಟ್ಟದ ಪೂರ್ಣಪ್ರಮಾಣದ ಉಣ್ಣೆಯನ್ನು ಉತ್ಪಾದನೆಗೆ ಬಳಸಲು ಸಾಧ್ಯವಾಗುತ್ತದೆ ಹಾಗೂ ಉಣ್ಣೆ ಕತ್ತರಿಸುವ ಸಾಮರ್ಥ್ಯವು ಹೆಚ್ಚಾಗುತ್ತದೆ.ಈ ಯೋಜನೆಯಿಂದ 300 ಜನಗಳಿಗೆ ಉದ್ಯೋಗಾವಕಾಶ ಕಲ್ಪಿಸಲು ಸಹಕಾರಿಯಾಗಿ ಇದರಿಂದಾಗಿ ಸ್ಥಳೀಯವಾಗಿ ಬೇಡಿಕೆ ಇರುವ ಕಚ್ಚಾಮಾಲನ್ನು ನೇಕಾರರಿಗೆ ಪೂರೈಸಲು ಅನುಕೂಲವಾಗುತ್ತದೆ.

<u>ಒಂದು ಘಟಕ ಸ್ಥಾಪನೆಗೆ ಸರ್ಕಾರದ ಸಹಾಯಧನ.</u>

- ಉಣ್ಣೆ ಕತ್ತರಿಸುವ ಯಂತ್ರ — ರೂ.3.50 ಲಕ್ಷ
- ಉಣ್ಣೆ ಸಾಗಣಿಕೆ ವಾಹನ — ರೂ.5.00 ಲಕ್ಷ
- ಉಣ್ಣೆ ಸಂಗ್ರಹಣದ ಉಗ್ರಾಣ — ರೂ.5.00 ಲಕ್ಷ
- ಉಣ್ಣೆ ಕತ್ತರಿಸುವ ಟೇಬಲ್, ಜನರೇಟರ್, ಉಗ್ರಾಣದ ಪಿಠೋಪಕರಣ ಹಾಗೂ ಇತರೆ — <u>ರೂ.1.50 ಲಕ್ಷ</u>

ಒಟ್ಟು <u>ರೂ.15.00 ಲಕ್ಷ</u>

<u>**ಯೋಜನೆ ಪಡೆಯಲು ಅರ್ಹತೆ:**</u>

- ಕರ್ನಾಟಕ ರಾಜ್ಯದಲ್ಲಿರುವ ಮತ್ತು ನಿಯಮಾನುಸಾರ ನೋಂದಾಯಿತ ಉಣ್ಣೆ ಸಹಕಾರ ಸಂಘಗಳು.
- ಸಂಘವು ನೇಕಾರರ ಸಾಂದ್ರತೆ ಇರುವ ಪ್ರದೇಶಗಳಲ್ಲಿರತಕ್ಕದ್ದು.
- ಸಂಘದಲ್ಲಿ ಕನಿಷ್ಠ 100 ಜನ ಸದಸ್ಯರಗಳು ಇರಬೇಕು.
- ಸಂಘವು ಕಂಬಳಿ ಉತ್ಪಾದನಾ ಚಟುವಟಿಕೆಯಲ್ಲಿ ತೊಡಗಿರತಕ್ಕದ್ದು.
- ಸಂಘದ ಹೆಸರಿನಲ್ಲಿ ಖಾಲಿ ನಿವೇಶನ ಹೊಂದಿರತಕ್ಕದ್ದು.
- ಕನಿಷ್ಠ 750 ಚದುರಡಿ ವಿಸ್ತೀರ್ಣವುಳ್ಳ ಉಗ್ರಾಣ ಕಟ್ಟಡ ನಿರ್ಮಿಸಬೇಕು.

**ಪ್ರಸ್ತಾವನೆಗೆ ದಾಖಲಾತಿಗಳು:**

1. 01 ರಿಂದ 29 ಸಂಘದ ವಿಶೇಷ ಮಾಹಿತಿ.
2. ನೊಂದಣಿ ಪ್ರಮಾಣ ಪತ್ರ
3. ಬೈಲಾ ಪ್ರತಿ.
4. ಸಂಘದ ಠರಾವು.
5. ಸಂಘದ ಕಾರ್ಯಚಟುವಟಿಕೆಯ ವಿವರ.
6. ಕಳೆದ ಮೂರು ವರ್ಷಗಳ ಆಡಿಟ್ ವರದಿ.
7. ಖಾಲಿ ನಿವೇಶನದ ದಾಖಲಾತಿ.

**ಫಲಾನುಭವಿಗಳ ಆಯ್ಕೆ ಹಾಗೂ ಯೋಜನಾ ಅನುಷ್ಠಾನ:**

ಫಲಾನುಭವಿಗಳ ಆಯ್ಕೆ ಹಾಗೂ ಯೋಜನಾ ಅನುಷ್ಠಾನವನ್ನು ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳಾದ ಉಪ/ಸಹಾಯಕ ನಿರ್ದೇಶಕರುಗಳು ನಿರ್ವಹಿಸುತ್ತಾರೆ.

2. **ಸುಧಾರಿತ ಕಾರ್ಡಿಂಗ್ ಯಂತ್ರ ಪೂರೈಕೆ:**

**ಉದ್ದೇಶ:** ಪ್ರಸ್ತುತ ಉಣ್ಣೆ ಹಸನು ಮಾಡಲು ಹಳೆಯ ಮಾದರಿಯ ಕಾರ್ಡಿಂಗ್ ಯಂತ್ರವನ್ನು ಬಳಸಲಾಗುತ್ತದೆ. ಇದರಿಂದಾಗಿ ಧೂಳು ತುಂಬಿಕೊಳ್ಳುವುದರಿಂದ ತುಪ್ಪಟದಿಂದ ಸಂಪೂರ್ಣವಾಗಿ ಬೇರ್ಪಡುವುದಿಲ್ಲ. ಈ ಧೂಳಿನಿಂದಾಗಿ ಕಾರ್ಡಿಂಗ್ ಯಂತ್ರ ನಿರ್ವಾಹಕನ ಆರೋಗ್ಯದಲ್ಲಿ ವ್ಯತ್ಯಯ ಉಂಟಾಗುವುದು ಸಹಜವಾಗಿರುತ್ತದೆ. ಅದರಿಂದ ನ್ಯೂಮಾಟಿಕ್ ಸಕ್ಕಿಂಗ್ ತಾಂತ್ರಿಕತೆ ಒಳಗೊಂಡಿದ್ದು, ಇದರಿಂದಾಗಿ ಕಾರ್ಡಿಂಗ್ ಶೆಡ್‌ನಲ್ಲಿ ಯಾವುದೇ ಮಾಲಿನ್ಯ ಉಂಟಾಗುವುದಿಲ್ಲ ಹಾಗೂ ಕಾರ್ಡಿಂಗ್ ಸಾಮರ್ಥ್ಯವು ಹೆಚ್ಚಾಗಲ್ಲಿದ್ದು ಇದರಿಂದಾಗಿ ಸ್ಥಳೀಯವಾಗಿ ಬೇಡಿಕೆ ಇರುವ ಕಚ್ಚಾಮಾಲನ್ನು ಪೂರೈಸಲು ಅನುಕೂಲವಾಗುತ್ತದೆ.

ಒಂದು ಸುಧಾರಿತ ಕಾರ್ಡಿಂಗ್ ಯಂತ್ರದ ಅಂದಾಜು ವೆಚ್ಚರೂ.2.00ಲಕ್ಷಗಳಾಗುತ್ತದೆ.

**ಯೋಜನೆ ಪಡೆಯಲು ಅರ್ಹತೆ:**

- ಕರ್ನಾಟಕ ರಾಜ್ಯದಲ್ಲಿರುವ ಮತ್ತು ನಿಯಮಾನುಸಾರ ನೋಂದಾಯಿತ ಉಣ್ಣೆ ಸಹಕಾರ ಸಂಘಗಳು.
- ಸಂಘವು ನೇಕಾರರ ಸಾಂದ್ರತೆ ಇರುವ ಪ್ರದೇಶಗಳಲ್ಲಿರತಕ್ಕದ್ದು.
- ಸಂಘದಲ್ಲಿ ಕನಿಷ್ಠ 100 ಜನ ಸದಸ್ಯರಗಳು ಇರಬೇಕು.
- ಸಂಘವು ಕಂಬಳಿ ಉತ್ಪಾದನಾ ಚಟುವಟಿಕೆಯಲ್ಲಿ ತೊಡಗಿರತಕ್ಕದ್ದು.
- ಸಂಘದಲ್ಲಿ ಕಾರ್ಡಿಂಗ್ ಯಂತ್ರ ಸ್ಥಾಪಿಸಲು ಸ್ವಂತ/ಬಾಡಿಗೆ ಕಟ್ಟಡ ಹೊಂದಿರತಕ್ಕದ್ದು.

**ಪ್ರಸ್ತಾವನೆಗೆ ದಾಖಲಾತಿಗಳು:**

1. 01 ರಿಂದ 29 ಸಂಘದ ವಿಶೇಷ ಮಾಹಿತಿ.
2. ನೊಂದಣಿ ಪ್ರಮಾಣ ಪತ್ರ
3. ಬೈಲಾ ಪ್ರತಿ.
4. ಸಂಘದ ಠರಾವು.
5. ಸಂಘದ ಕಾರ್ಯಚಟುವಟಿಕೆಯ ವಿವರ.
6. ಕಳೆದ ಮೂರು ವರ್ಷಗಳ ಆಡಿಟ್ ವರದಿ.
7. ಕಟ್ಟಡದ ದಾಖಲಾತಿ/ ಬಾಡಿಗೆ ಕರಾರು ಪತ್ರ.

**ಫಲಾನುಭವಿಗಳ ಆಯ್ಕೆ ಹಾಗೂ ಯೋಜನಾ ಅನುಷ್ಠಾನ:**

ಫಲಾನುಭವಿಗಳ ಆಯ್ಕೆ ಹಾಗೂ ಯೋಜನಾ ಅನುಷ್ಠಾನವನ್ನು ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳಾದ ಉಪ/ಸಹಾಯಕ ನಿರ್ದೇಶಕರುಗಳು ನಿರ್ವಹಿಸುತ್ತಾರೆ.

3. **ಮೆಡ್ಲೇರಿ ಚರಕ ಪೂರೈಕೆ**

**ಉದ್ದೇಶ:** ಪ್ರಸ್ತುತ ಕಂಬಳಿ ನೇಕಾರರು ಉಣ್ಣೆಯ ನೂಲನ್ನು ಹಳೆಯ ಮಾದರಿಯ ಚರಕಗಳನ್ನು ಬಳಸುತ್ತಿದ್ದು, ಇದರಿಂದಾಗಿ ದೈಹಿಕ ಶ್ರಮ ಹೆಚ್ಚಾಗಿದ್ದು, ಇದರಿಂದಾಗಿ ಬೆನ್ನು ಹಾಗೂ ಸೋಂಟದ ನೋವುಗಳು ಬರುವ ಸಾಧ್ಯತೆಗಳು ಹೆಚ್ಚಾಗಿರುತ್ತದೆ ಹಾಗೂ ಇದರಿಂದಾಗಿ ಉತ್ಪಾದನಾ ಸಾಮರ್ಥ್ಯ ಹಾಗೂ ಗುಣಮಟ್ಟ ಕಮ್ಮಿಯದಾಗಿರುತ್ತದೆ.ಈ ಹಿನ್ನೆಲೆಯಲ್ಲಿ ಸುಧಾರಿತ ಮೆಡ್ಲೇರಿ ಚರಕ ಬಳಸಿ ಉಣ್ಣೆ ನೂಲ ತೆಗೆಯುವುದರಿಂದ ಗುಣಮಟ್ಟದ ನೂಲು ಪಡೆಯಲು ಹಾಗೂ ಉತ್ಪಾದನಾ ಸಾಮರ್ಥ್ಯ ಹೆಚ್ಚಲು ಅನುಕೂಲವಾಗುತ್ತದೆ.

ಒಂದು ಮೆಡ್ಲೇರಿ ಚರಕ ಪೂರೈಕೆಗೆ ಅಂದಾಜು ರೂ.4,600/–ಗಳಾಗುತ್ತದೆ.

**ಯೋಜನೆ ಪಡೆಯಲು ಅರ್ಹತೆ:**

- ಕರ್ನಾಟಕ ರಾಜ್ಯದಲ್ಲಿರುವ ಮತ್ತು ನಿಯಮಾನುಸಾರ ನೋಂದಾಯಿತ ಉಣ್ಣೆ ಸಹಕಾರ ಸಂಘದ ಸದಸ್ಯರಾಗಿರಬೇಕು.
- ಸದಸ್ಯರು ಕಂಬಳಿ ಉತ್ಪಾದನಾ ಚಟುವಟಿಕೆಯಲ್ಲಿ ತೊಡಗಿರಬೇಕು.

**ಪ್ರಸ್ತಾವನೆಗೆ ದಾಖಲಾತಿಗಳು:**

1. ಫಲಾನುಭವಿಯ ಅರ್ಜಿ.
2. ಫಲಾನುಭವಿಯು ಕಂಬಳಿ ಉತ್ಪಾದನಾ ಚಟುವಟಿಕೆಯಲ್ಲಿ ತೊಡಗಿರುವ ಬಗ್ಗೆ ಸಂಘದಿಂದ ಧೃಡೀಕರಣ ಪತ್ರ.

**ಫಲಾನುಭವಿಗಳ ಆಯ್ಕೆ ಹಾಗೂ ಯೋಜನಾ ಅನುಷ್ಠಾನ:**

ಫಲಾನುಭವಿಗಳ ಆಯ್ಕೆ ಹಾಗೂ ಯೋಜನಾ ಅನುಷ್ಠಾನವನ್ನು ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳಾದ ಉಪ/ಸಹಾಯಕ ನಿರ್ದೇಶಕರುಗಳು ನಿರ್ವಹಿಸುತ್ತಾರೆ.

4. **ಕೌಶಲ್ಯಾಭಿವೃದ್ಧಿ ಕೇಂದ್ರ ಸ್ಥಾಪನೆ**

**ಉದ್ದೇಶ:** ಪ್ರಸ್ತುತ ಕಂಬಳಿ ನೇಕಾರರು ಎಸ್ಟೇಟ್ ಮಾದರಿಯ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಬಳಸುವಂತಹ ಕಂಬಳಿಗಳನ್ನು ಮಾತ್ರ ಉತ್ಪಾದಿಸುತ್ತಿದ್ದು, ಈ ಕಂಬಳಿಗಳಿಗೆ ಬೇಡಿಕೆ ಕಮ್ಮಿ ಇರುತ್ತದೆ. ಅಲ್ಲದೆ ಈ ಉತ್ಪಾದನೆಯಿಂದ ನೇಕಾರರಿಗೂ ಯಾವುದೇ ಹೆಚ್ಚಿನ ಆದಾಯ ಇರುವುದಿಲ್ಲ. ಈ ಹಿನ್ನೆಲೆಯಲ್ಲಿ ಸಂಸ್ಕರಿಸಿದ ಉಣ್ಣೆಯನ್ನು ಬಳಸಿ ಆಧುನಿಕ ಯಂತ್ರಗಳಿಂದ ಮಾರುಕಟ್ಟೆಯಲ್ಲಿ ಬೇಡಿಕೆ ಇರುವ ಉಣ್ಣೆ ಉತ್ಪನ್ನಗಳನ್ನು ಉತ್ಪಾದಿಸುವುದು ಇದರಿಂದಾಗಿ ನೇಕಾರರಿಗೆ ಆರ್ಥಿಕ ಮತ್ತು ಸಾಮಾಜಿಕ ಭದ್ರತೆ ಒದಗಿಸುವುದು ಅತೀ ಅವಶ್ಯವಿರುತ್ತದೆ.ಈ ನೇಕಾರರಿಗೆ ಯಾವುದೇ ತಾಂತ್ರಿಕತೆಯ ಅನುಭವ ಇರುವುದಿಲ್ಲ. ಹೊಸ ತಾಂತ್ರಿಕತೆ ಹಾಗೂ ಮೌಲ್ಯಾಧಾರಿತ ಉತ್ಪನ್ನಗಳ ಉತ್ಪಾದನೆಗೆ ನೇಕಾರರಿಗೆ ತರಬೇತಿ ಅತೀ ಅವಶ್ಯವಿರುತ್ತದೆ.ಈ ಹಿನ್ನೆಲೆಯಲ್ಲಿ ಕೌಶಲ್ಯಾಭಿವೃದ್ಧಿ ಕೇಂದ್ರ ಸ್ಥಾಪನೆ ಅವಶ್ಯವಿರುತ್ತದೆ.

**<u>ಒಂದು ಕೌಶಲ್ಯಾಭಿವೃದ್ಧಿ ಕೇಂದ್ರ ಸ್ಥಾಪನೆಗೆ ತಗಲುವ ವೆಚ್ಚ</u>**

| ಕ್ರ.ಸಂ | ಯಂತ್ರಗಳ ವಿವರ | ಸಂಖ್ಯೆ | ದರ (ರೂ.ಲಕ್ಷಗಳಲ್ಲಿ) | ಒಟ್ಟು (ರೂ.ಲಕ್ಷಗಳಲ್ಲಿ) |
|---|---|---|---|---|
| 1. | ಉಣ್ಣೆ ಕತ್ತರಿಸುವ ಯಂತ್ರ | 1 | 3.50 | 3.50 |
| 2. | ಉಣ್ಣೆಯ ಸಂಸ್ಕರಣಾ ಉಪಕರಣ | 1 | 1.00 | 1.00 |
| 3. | ಮೆಡ್ಲೇರಿ ಚರಕ | 25 | 0.046 | 1.15 |
| 4. | ಬಣ್ಣ ಹಾಕುವ ಉಪಕರಣ | 1 | 1.00 | 1.00 |
| 5. | ಸುಧಾರಿತ ಫ್ರೆಮ್ ಮಗ್ಗಗಳು | 20 | 0.50 | 10.00 |
| 6. | ವಾರ್ಪಿಂಗ್ ಯಂತ್ರ | 1 | 0.80 | 0.80 |
| 7. | ಒವರ್ ಲಾಕ್, ಪೋಲ್ಡ್, ಕಟ್ಟಿಂಗ್ ಹಾಗೂ ಇತರೆ | 1 | 1.00 | 1.00 |
| 8. | ಬ್ಯಾಸ್ಕೆಟ್ ತಯಾರಿಕ ಉಪಕರಣ | 1 ಸೆಟ್ | 0.55 | 0.55 |
| 9. | ಉಣ್ಣೆ ಕತ್ತರಿಸುವ ಟೇಬಲ್, ಚರಕಗಳಿಗೆ ಕುರ್ಚಿ ಹಾಗೂ ಇತರೆ ಪಿಠೋಪಕರಣಗಳು | 1 | 1.00 | 1.00 |
| 10. | ಕಟ್ಟಡ (2000 ಚದರ ಅಡಿ) | 1 | 15.00 | 15.00 |
| | ಒಟ್ಟು | | | 35.00 |

ಈ ಕೇಂದ್ರಗಳ ಮೂಲಕ ವಾರ್ಷಿಕವಾಗಿ 2400 ನೇಕಾರರುಗಳಿಗೆ ಕೌಶಲ್ಯ ತರಬೇತಿ ನೀಡಲು ಅನುಕೂಲವಾಗುತ್ತದೆ.

**<u>ಯೋಜನೆ ಪಡೆಯಲು ಅರ್ಹತೆ:</u>**

- ಕರ್ನಾಟಕ ರಾಜ್ಯದಲ್ಲಿರುವ ಮತ್ತು ನಿಯಮಾನುಸಾರ ನೋಂದಾಯಿತ ಉಣ್ಣೆ ಸಹಕಾರ ಸಂಘ/ ರಾಜ್ಯ ಮಟ್ಟದ ಮಹಾಮಂಡಳಗಳು.
- ಸಂಘವು ನೇಕಾರರ ಸಾಂದ್ರತೆ ಇರುವ ಪ್ರದೇಶಗಳಲ್ಲಿರತಕ್ಕದ್ದು.
- ಸಂಘವು ಕಂಬಳಿ ಉತ್ಪಾದನಾ ಚಟುವಟಿಕೆಯಲ್ಲಿ ತೊಡಗಿರತಕ್ಕದ್ದು.
- ಸಂಘದ ಹೆಸರಿನಲ್ಲಿ ಖಾಲಿ ನಿವೇಶನ ಹೊಂದಿರತಕ್ಕದ್ದು.
- ಕನಿಷ್ಠ 2000 ಚದುರಡಿ ವಿಸ್ತೀರ್ಣವುಳ್ಳ ಕೌಶಲ್ಯ ಅಭಿವೃದ್ಧಿ ಕೇಂದ್ರ ನಿರ್ಮಿಸಬೇಕು.

**<u>ಪ್ರಸ್ತಾವನೆಗೆ ದಾಖಲಾತಿಗಳು:</u>**

1. 01 ರಿಂದ 29 ಸಂಘದ ವಿಶೇಷ ಮಾಹಿತಿ.
2. ನೊಂದಣಿ ಪ್ರಮಾಣ ಪತ್ರ
3. ಬೈಲಾ ಪ್ರತಿ.
4. ಸಂಘದ ಠರಾವು.
5. ಸಂಘದ ಕಾರ್ಯಚಟುವಟಿಕೆಯ ವಿವರ.
6. ಕಳೆದ ಮೂರು ವರ್ಷಗಳ ಆಡಿಟ್ ವರದಿ.

7. ಖಾಲಿ ನಿವೇಶನದ ದಾಖಲಾತಿ.

**ಫಲಾನುಭವಿಗಳ ಆಯ್ಕೆ ಹಾಗೂ ಯೋಜನಾ ಅನುಷ್ಠಾನ:**

ಫಲಾನುಭವಿಗಳ ಆಯ್ಕೆ ಹಾಗೂ ಯೋಜನಾ ಅನುಷ್ಠಾನವನ್ನು ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳಾದ ಉಪ/ಸಹಾಯಕ ನಿರ್ದೇಶಕರುಗಳು ನಿರ್ವಹಿಸುತ್ತಾರೆ.

5. **ವಸತಿ ಕಾರ್ಯಗಾರ**

**ಉದ್ದೇಶ:** ನೇಯ್ಗೆ ವೃತ್ತಿಯನ್ನು ಉತ್ತಮ ಪರಿಸರದಲ್ಲಿ ನಿರ್ವಹಿಸಲು ಹಾಗೂ ಅವರಿಗೆ ವಾಸಿಸಲು ಅನುಕೂಲವಾಗುವಂತೆ ವಸತಿ ಸಹಿತ ಕಾರ್ಯಗಾರಗಳನ್ನು ನಿರ್ಮಿಸಿಕೊಳ್ಳಲು ವಸತಿರಹಿತ ಫಲಾನುಭವಿಗಳಿಗೆ ಈ ಸೌಲಭ್ಯ ಕಲ್ಪಿಸಲಾಗುವುದು. ಇದರಿಂದ ಅವರು ನಿರಂತರ ಉದ್ಯೋಗದಲ್ಲಿ ತೊಡಗಿಸಿಕೊಂಡು ಅವರ ಜೀವನ ಮಟ್ಟ ಸುಧಾರಿಸಲು ಅನುಕೂಲವಾಗುತ್ತದೆ.
ವಸತಿ ಕಾರ್ಯಗಾರ ಘಟಕ ವೆಚ್ಚ ರೂ.2.00ಲಕ್ಷ.

**ಅರ್ಹತೆಗಳು:**

1) ಫಲಾನುಭವಿಯು ವಸತಿ ರಹಿತರಾಗಿದ್ದು ಸ್ವಂತ ಖಾಲಿ ನಿವೇಶನವನ್ನು ಹೊಂದಿರಬೇಕು.
2) ಫಲಾನುಭವಿಯು ನಿರ್ಮಿಸಲ್ಪಡುವ ವಸತಿ ಕಾರ್ಯಗಾರದ ಕನಿಷ್ಠ 400 ಚದುರಡಿ ಇರತಕ್ಕದ್ದು.
3) ಸರ್ಕಾರದ ಇತರೆ ಯಾವುದೇ ಯೋಜನೆಗಳಲ್ಲಿ ಈ ಸೌಲಭ್ಯ ಪಡೆದಿರಬಾರದು.
4) ಕಂಬಳಿ ನೇಕಾರಿಕೆ ಚಟುವಟಿಕೆಗಳಲ್ಲಿ / ವೃತ್ತಿಯಲ್ಲಿ ತೊಡಗಿರಬೇಕು.
5) ಅಸಂಘಟಿತ ವಲಯ, ವೈಯಕ್ತಿಕ ನೇಕಾರರು ಮತ್ತು ಸಂಘಟಿತ ವಲಯದಲ್ಲಿ ಬರುವ ಫಲಾನುಭವಿಗಳು.

**ಪ್ರಸ್ತಾವನೆಯ ದಾಖಲಾತಿಗಳು:**

1) ಸಾಮಾನ್ಯ ಅರ್ಜಿ ನಮೂನೆಯಲ್ಲಿ ಫಲಾನುಭವಿಯ ಮಾಹಿತಿ
2) ಫಲಾನುಭವಿ ಭಾವಚಿತ್ರ.
3) ಖಾಲಿ ನಿವೇಶನದ ದಾಖಲಾತಿ.
4) ಕಂಬಳಿ ನೇಯ್ಗೆ ಚಟುವಟಿಕೆಯಲ್ಲಿ ತೊಡಗಿರುವ ಬಗ್ಗೆ ಸಂಘದಿಂದ ಧೃಢೀಕರಣ ಪತ್ರ.

**6. ಸಾಮೂಹಿಕ ಸೌಲಭ್ಯ ಕೇಂದ್ರ**

ಕಂಬಳಿ ನೇಕಾರರು ಸಾಂದ್ರತೆ ಇರುವ ಪ್ರದೇಶಗಳಲ್ಲಿ ಸಹಕಾರ ಸಂಘಗಳ ಮುಖಾಂತರ ಒಂದೇ ಸ್ಥಳದಲ್ಲಿ ನೇಕಾರಿಕೆ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ನೆರವಾಗುವಂತೆ ಸಾಮೂಹಿಕ ಸೌಲಭ್ಯ ಕೇಂದ್ರಗಳನ್ನು ನಿರ್ಮಿಸಿಕೊಡಲಾಗುವುದು. ಇದರಿಂದ ಒಂದೇ ಸ್ಥಳದಲ್ಲಿ ಮೂಲಭೂತ ಯಂತ್ರೋಪಕರಣಗಳ ನೇಯ್ಗೆ ಕೇಂದ್ರ, ಮಗ್ಗಪೂರ್ವ ಚಟುವಟಿಕೆಗಳು, ಕೈಮಗ್ಗಗಳು ಮತ್ತು ಸುಧಾರಿತ ಉಪಕರಣಗಳನ್ನು ಅಳವಡಿಸಿ ನೇಕಾರರು ನಿರಂತರ ಉತ್ಪಾದನೆಯಲ್ಲಿ ತೊಡಗಿಸಿಕೊಂಡು ಅವರ ಜೀವನಮಟ್ಟವನ್ನು ಸುಧಾರಿಸಲು ನೆರವು ನೀಡುವುದು.
ಪ್ರತಿ ಘಟಕಕ್ಕೆ ರೂ.10.00ಲಕ್ಷಗಳು.

**ಯೋಜನೆ ಪಡೆಯಲು ಅರ್ಹತೆ:**

- ಕರ್ನಾಟಕ ರಾಜ್ಯದಲ್ಲಿರುವ ಮತ್ತು ನಿಯಮಾನುಸಾರ ನೋಂದಾಯಿತ ಉಣ್ಣೆ ಸಹಕಾರ ಸಂಘಗಳು.
- ಸಂಘವು ನೇಕಾರರ ಸಾಂದ್ರತೆ ಇರುವ ಪ್ರದೇಶಗಳಲ್ಲಿರತಕ್ಕದ್ದು.

- ಸಂಘದಲ್ಲಿ ಕನಿಷ್ಠ 100 ಜನ ಸದಸ್ಯರಗಳು ಇರಬೇಕು.
- ಸಂಘವು ಕಂಬಳಿ ಉತ್ಪಾದನಾ ಚಟುವಟಿಕೆಯಲ್ಲಿ ತೊಡಗಿರತಕ್ಕದ್ದು.
- ಸಂಘದ ಹೆಸರಿನಲ್ಲಿ ಖಾಲಿ ನಿವೇಶನ ಹೊಂದಿರತಕ್ಕದ್ದು.
- ಕನಿಷ್ಠ 1500 ಚದುರಡಿ ವಿಸ್ತೀರ್ಣವುಳ್ಳ ಉಗ್ರಾಣ ಕಟ್ಟಡ ನಿರ್ಮಿಸಬೇಕು.

<u>ಪ್ರಸ್ತಾವನೆಗೆ ದಾಖಲಾತಿಗಳು:</u>

1. 01 ರಿಂದ 29 ಸಂಘದ ವಿಶೇಷ ಮಾಹಿತಿ.
2. ನೊಂದಣಿ ಪ್ರಮಾಣ ಪತ್ರ
3. ಬೈಲಾ ಪ್ರತಿ.
4. ಸಂಘದ ಠರಾವು.
5. ಸಂಘದ ಕಾರ್ಯಚಟುವಟಿಕೆಯ ವಿವರ.
6. ಕಳೆದ ಮೂರು ವರ್ಷಗಳ ಆಡಿಟ್ ವರದಿ.
7. ಖಾಲಿ ನಿವೇಶನದ ದಾಖಲಾತಿ.

<u>ಫಲಾನುಭವಿಗಳ ಆಯ್ಕೆ ಹಾಗೂ ಯೋಜನಾ ಅನುಷ್ಠಾನ:</u>

ಫಲಾನುಭವಿಗಳ ಆಯ್ಕೆ ಹಾಗೂ ಯೋಜನಾ ಅನುಷ್ಠಾನವನ್ನು ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳಾದ ಉಪ/ಸಹಾಯಕ ನಿರ್ದೇಶಕರುಗಳು ನಿರ್ವಹಿಸುತ್ತಾರೆ.

## 7. <u>ಚಳ್ಳಕೆರೆಯಲ್ಲಿ ಕಂಬಳಿ ಮಾರುಕಟ್ಟೆ ಸಂಕೀರ್ಣ ಸ್ಥಾಪನೆ ಕುರಿತು.</u>

**ಉದ್ದೇಶ:**ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ, ಮೊಳಕಾಲ್ಮೂರು ಹಾಗೂ ಹಿರಿಯೂರು ತಾಲ್ಲೂಕಿನಲ್ಲಿ ಉಣ್ಣೆ ನೇಕಾರರ ಸಾಂದ್ರತೆ ಹೆಚ್ಚಾಗಿದ್ದು, ಜಿಲ್ಲೆಯಲ್ಲಿ ಅಂದಾಜು ಒಟ್ಟು 4,500 ಉಣ್ಣೆ ಕೈಮಗ್ಗಗಳಿದ್ದು, ಈ ಪೈಕಿ 2,700 ಕೈಮಗ್ಗಗಳು ಕಾರ್ಯನಿರತವಾಗಿದ್ದು, ವಿವಿಧ ನಮೂನೆಯ ಕಂಬಳಿಗಳನ್ನು ಉತ್ಪಾದಿಸುತ್ತಾರೆ.ಚಳ್ಳಕೆರೆಯಲ್ಲಿ ಪ್ರತಿ ಭಾನುವಾರ ಉಣ್ಣೆ ಕಂಬಳಿಗಳ ಮಾರುಕಟ್ಟೆ ನಡೆಯುತ್ತಿದ್ದು, ಸದರಿ ಮಾರುಕಟ್ಟೆಯಲ್ಲಿ ಜಿಲ್ಲೆಯಲ್ಲಿ ಉತ್ಪಾದಿಸಿದ ಕಂಬಳಿಗಳಲ್ಲದೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಉತ್ಪಾದಿಸುವ ಕಂಬಳಿಗಳನ್ನು ಹಾಗೂ ಹೊರ ರಾಜ್ಯಗಳಾದ ಆಂದ್ರ ಪ್ರದೇಶ, ತಮಿಳುನಾಡು ಹಾಗೂ ಮಹಾರಾಷ್ಟ್ರ ರಾಜ್ಯಗಳ ಉತ್ಪನ್ನಗಳನ್ನು ಮಾರಾಟ ಮಾಡಲಾಗುತ್ತಿದೆ. ಹೊರ ರಾಜ್ಯದ ವರ್ತಕರು ಈ ಪ್ರದೇಶಕ್ಕೆ ಭೇಟಿ ನೀಡಿ ಕಂಬಳಿಗಳನ್ನು ಖರೀದಿ ಮಾಡುತ್ತಿರುತ್ತಾರೆ. ಪ್ರತಿ ವಾರ ಸುಮಾರು ರೂ.25.00ಲಕ್ಷ ರಿಂದ ರೂ.30.00 ಲಕ್ಷಗಳ ಉಣ್ಣೆ ಹಾಗೂ ಕಂಬಳಿಗಳನ್ನು ಮೈದಾನದ ಬಯಲು ಪ್ರದೇಶದಲ್ಲಿ ಮಾರಾಟ ವಹಿವಾಟು ನಡೆಯುತ್ತಿದೆ.ಈ ಪ್ರದೇಶದಲ್ಲಿ ಸುಸಜ್ಜಿತವಾದ ಮಾರುಕಟ್ಟೆ ವ್ಯವಸ್ಥೆ ಇರುವುದಿಲ್ಲ. ಈ ಮಾರುಕಟ್ಟೆ ಸಂಕಿರ್ಣದ ಸ್ಥಾಪನೆಯಿಂದಾಗಿ ಕಂಬಳಿ ಮಾರಾಟಗಾರರಿಗೂ ಹಾಗೂ ಕೊಳ್ಳುವವರಿಗೂ ತುಂಬ ಅನಾನುಕೂಲವಾಗುತ್ತಿದೆ. ಈ ಹಿನ್ನಲ್ಲೆಯಲ್ಲಿ ಕರ್ನಾಟಕ ರಾಜ್ಯ ಉಣ್ಣೆ ಕೈಮಗ್ಗದ ನೇಕಾರರ ಖಾದಿಯೇತರ ಸಹಕಾರ ಸಂಘಗಳ ಮಹಾಮಂಡಳ ನಿ., ಚಳ್ಳಕೆರೆ ಈ ಮಹಾಮಂಡಳದ ಮೂಲಕ ಮಂಡಳದ ಹೆಸರಿನಲ್ಲಿರುವ ಖಾಲಿ ನಿವೇಶನದಲ್ಲಿ ಮಾರುಕಟ್ಟೆ ಸಂಕೀರ್ಣವನ್ನು ರೂ.200.00ಲಕ್ಷಗಳ ಅಂದಾಜು ವೆಚ್ಚದಲ್ಲಿ 50 ಮಾರಟ ಮಳಿಗೆಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ. ಇದರಿಂದಾಗಿ ಸ್ಥಳೀಯ ಪ್ರಾಥಮಿಕ ಸಹಕಾರ ಸಂಘಗಳ ಉತ್ಪನಗಳನ್ನು ಶೇಖರಣೆ ಮಾಡಿ ಏಕರೂಪದ ಮಾರುಕಟ್ಟೆ ವ್ಯವಸ್ಥೆಯನ್ನು ಮಾಡಲು ಅನುಕೂಲವಾಗುತ್ತದೆ. ಈ ರೀತಿ ನೇಕಾರರು ಉತ್ಪಾದಿಸಿದ ಉತ್ಪನ್ನಗಳಿಗೆ ಸೂಕ್ತ ಮಾರುಕಟ್ಟೆ ಒದಗಿಸಿದಲ್ಲಿ ನೇಕಾರರು ನಿರಂತರವಾಗಿ ಕಂಬಳಿ ಉತ್ಪಾದನೆಯಲ್ಲಿ ತೊಡಗಲು

ಸಹಕಾರಿಯಾಗುತ್ತದೆ.ಇದರಿಂದಾಗಿ ನೇಕಾರರ ಆರ್ಥಿಕ ಸ್ಥಿತಿ ಸುಧಾರಣೆಗೊಂಡು ಅವರ ಜೀವನ ಮಟ್ಟ ಉತ್ತಮಗೊಳ್ಳಲು ಅನುಕೂಲವಾಗುತ್ತದೆ.ಯೋಜನಾ ವೆಚ್ಚ ಒಟ್ಟು ರೂ.200.00ಲಕ್ಷಗಳು.

**ಪ್ರಸ್ತಾವನೆಗೆ ದಾಖಲಾತಿಗಳು:**

1. 01 ರಿಂದ 29 ಮಂಡಳದ ವಿಶೇಷ ಮಾಹಿತಿ.
2. ನೊಂದಣಿ ಪ್ರಮಾಣ ಪತ್ರ
3. ಬೈಲಾ ಪ್ರತಿ.
4. ಮಂಡಳದ ಠರಾವು.
5. ಮಂಡಳದ ಕಾರ್ಯಚಟುವಟಿಕೆಯ ವಿವರ.
6. ಕಳೆದ ಮೂರು ವರ್ಷಗಳ ಆಡಿಟ್ ವರದಿ.
7. ಖಾಲಿ ನಿವೇಶನದ ದಾಖಲಾತಿ.
8. ಕಟ್ಟಡ ನಿರ್ಮಾಣದ ಪರವಾನಿಗೆ ಪತ್ರ.
9. ಕಟ್ಟಡದ ನೀಲಿ ನಕ್ಷೆ.
10. ಕಟ್ಟಡದ ಅಂದಾಜು ಪಟ್ಟಿ.

**ಯೋಜನಾ ಅನುಷ್ಠಾನ:**

ಯೋಜನಾ ಅನುಷ್ಠಾನವನ್ನು ಉಪ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಜಿಲ್ಲಾ ಪಂಚಾಯತ್, ಚಿತ್ರದುರ್ಗ ಜಿಲ್ಲೆ.ಇವರು ನಿರ್ವಹಿಸುತ್ತಾರೆ.

**೮.ಯೋಜನಾ ನಿರ್ವಹಣಾ ವೆಚ್ಚ.**

ಸ್ಥಳೀಯವಾಗಿ ಲಭ್ಯವಿರುವ ಉಣ್ಣೆಯನ್ನು ಉಪಯೋಗಿಸಿಕೊಂಡು ವಿವಿಧ ಹಂತಗಳಲ್ಲಿ ಸುಧಾರಿತ ತಾಂತ್ರಿಕತೆಯನ್ನು ಅಳವಡಿಸಿಕೊಂಡು ಬೇಡಿಕೆ ಇರುವ ಹಾಗೂ ನೇಕಾರರಿಗೆ ಹೆಚ್ಚಿನ ವರಮಾನ ತರುವಂತಹ ಉತ್ಪನ್ನಗಳನ್ನು ಅಭಿವೃದ್ದಿ ಪಡಿಸಿ ಉತ್ಪಾದನೆಯಲ್ಲಿ ತೊಡಗಿಸಲು ಉದ್ದೇಶಿಸಲಾಗಿದ್ದು ಈ ಕುರಿತು ಮೇಲ್ಕಂಡ ಯೋಜನೆಗಳಿಗೆ ತಾಂತ್ರಿಕ ಸಲಹೆ ನೀಡಲು, ಯೋಜನಾ ವರದಿ ಸಿದ್ದಪಡಿಸಲು ಹಾಗೂ ಅನುಷ್ಠಾನಗೊಳಿಸಲು ಮತ್ತು ಯೋಜನೆ ನಿರ್ವಹಣೆಗೆ, ಈ ಕ್ಷೇತ್ರದಲ್ಲಿ ತಾಂತ್ರಿಕವಾಗಿ ಪರಿಣಿತರ ತಂಡದ ಅವಶ್ಯಕತೆ ಇರುತ್ತದೆ.
ಯೋಜನಾ ನಿರ್ವಹಣಾ ವೆಚ್ಚ ರೂ.12.00ಲಕ್ಷಗಳು.